# ಅಜ್ಜನ ಪೆನ್ನು

**ಸುಧಾ ಯುಗಾದಿ ವಿಶೇಷಾಂಕ- 2017ರ ಪ್ರಬಂಧ ಸ್ಪರ್ಧೆಯಲ್ಲಿ ತೀರ್ಪುಗಾರರ ಮೆಚ್ಚುಗೆ ಪಡೆದ ಪ್ರಬಂಧ**

■ ಬೇಲೂರು ರಾಮಮೂರ್ತಿ



ನನ್ನ ಅಜ್ಜನಿಗೆ ನಾವೆಲ್ಲಾ ಏಕವಚನದಲ್ಲಿ ಕರೆದರೇ ಖುಷಿ. ಅದೇನೋ ಸುಡುಗಾಡು ಪ್ರೀತಿ ಪ್ರೇಮ ಅಕ್ಕರೆ ಮಮತೆ ಒಂದೂ ಇರದ ಹೋಗಿ ಬನ್ನಿ ಕೂತ್ಕೊಳಿ ತಿನ್ನಿ ಇವೆಲ್ಲ ಚೆನ್ನಾಗಿರೋಲ್ಲ. ಅಚ್ಚುಕಟ್ಟಾಗಿ ಅಜ್ಜಾ ಬಾ ಅಜ್ಜಾ ಕೂತ್ಕೊ ಅಜ್ಜಾ ಗಲಾಟೆ ಮಾಡ ಬೇಡ ಅಂದ್ರೆ ಸ್ವರ್ಗಕ್ಕೆ ಮೂರೇ ಗೇಣು ಅಂತಿದ್ರು. ಮನೆಯಲ್ಲಿ ಎಲ್ಲರೂ ಅವರನ್ನು ಏಕವಚನದಲ್ಲಿಯೇ ಕರೆಯುತ್ತಿದ್ದುದು. ಅಜ್ಜನಿಗೆ ಕೋಪ ಬರುತ್ತಿರಲಿಲ್ಲ. ಆದರೆ ಅವರ ಪೆನ್ನು ಮುಟ್ಟಿದರೆ ಎಲ್ಲಿಲ್ಲದ ಕೋಪ ಬರುತ್ತಿತ್ತು. ಕೋಪ ಬಂದರೆ ಅಜ್ಜ ಯಾರನ್ನೂ ಬೈಯುತ್ತಿರಲಿಲ್ಲ, ಹೊಡೆಯುತ್ತಿರಲಿಲ್ಲ, ಕಿರುಚಾಡು ತ್ತಿರಲಿಲ್ಲ. ಬದಲಿಗೆ ಒಂದಿಡೀ ದಿನ ಉಪವಾಸ. ನಿಮ್ಮಜ್ಜ ಉಪವಾಸದಿಂದ ಸಾಯಬೇಕು ಅಂತಿದ್ರೆ ಅವನಿಗೆ ಕೋಪ ಬರಿಸಿ ಎನ್ನುತ್ತಿದ್ದರು.

ಅಜ್ಜ ಜೋಪಾನವಾಗಿ ಕಾಪಾಡಿಕೊಂಡು ಬಂದ ಅನೇಕ ವಸ್ತುಗಳಲ್ಲಿ ಅವರ ಪೆನ್ನೂ ಒಂದು. ಅದು ಅವರ ಕಾಲದ್ದೇ. ಅದಕ್ಕೆ ಅಂಗಡಿಯಿಂದ ಇಂಕು ಬಾಟಲನ್ನು ಮನೆಗೆ ತಂದು ಫಿಲ್ಲರ್‌ನಿಂದ ಪೆನ್ನಿಗೆ ಇಂಕು ತುಂಬಬೇಕು. ಈ ಕೆಲಸವನ್ನು ಅಜ್ಜ ಯಾರಿಗೂ ಕೊಡುತ್ತಿರಲಿಲ್ಲ. ಅಪರೂಪಕ್ಕೊಮ್ಮೆ 'ಮೂರ್ತಿ ಬಾ ಇಲ್ಲಿ, ಪೆನ್ನಿಗೆ ಇಂಕು ತುಂಬು' ಎನ್ನುತ್ತಿದ್ದರು. ಇಂಕು ತುಂಬೋ ಮುಂಚೆ ಒಂದು ಕೊಳೆ ಬಟ್ಟೆ ಮೇಲೆ ಇಂಕು ಶೀಶೆ ಇಟ್ಟು ನಿಧಾನವಾಗಿ ಅದರ ಮುಚ್ಚಳ ತೆಗೆದು ಅದರಲ್ಲಿ ಫಿಲ್ಲರ್ ಮುಳುಗಿಸಿ ನಂತರ ಪೆನ್ನಿಗೆ ತುಂಬಬೇಕು. ಇಂಕು ಎಷ್ಟು ತುಂಬಬೇಕು, ಎಷ್ಟು ವೇಗವಾಗಿ ತುಂಬಬೇಕು ಇವೆಲ್ಲ ಅಜ್ಜನದೇ ತಯಾರಿ. ಒಂದು ದಿನ ಅಜ್ಜ ನೀನು ನನ್ನ ಪೆನ್ನಿಗೆ ಇಂಕು ತುಂಬಿಕೊಟ್ಟರೆ ಅಜ್ಜ ಮೊಮ್ಮಗನ ನಡುವೆ ಒಂಥರಾ ಮಮತೆ ಬೆಳೆಯುತ್ತೆ. ಅಜ್ಜನ ಕೆಲಸ ಮಾಡಿಕೊಟ್ಟೆ ಅನ್ನೋ ಧನ್ಯತಾ ಭಾವ ನಿನಗೆ. ಮೊಮ್ಮಗನನ್ನು ಕೂರಿಸಿಕೊಂಡು ಪೆನ್ನಿಗೆ ಇಂಕು ತುಂಬೋ ಕೆಲಸ ಮಾಡಿಸಿದೆ ಅಂತ ಖುಷಿ ನನಗೆ ಅಂದಿದ್ದರು.

ಒಂದು ದಿನ ನಾನು ಅಜ್ಜನನ್ನು 'ಈ ಪೆನ್ನನ್ನು ನೀನು ಎಷ್ಟು ವರ್ಷದಿಂದ ಇಟ್ಕೊಂಡಿದೀಯ' ಅಂತ ಕೇಳಿದೆ. ಅದಕ್ಕೆ ಅಜ್ಜ 'ಇದು ನನ್ನ ಜೀವ ಕಣೋ' ಅಂದಿದ್ದರು.

'ಅಜ್ಜಿ ನಿನ್ನನ್ನು ಬಿಟ್ಟು ಹೋದ ಮೇಲೆ ನೀನು ಒಂಟಿ ಅಲ್ವಾ' ಅಂತ ಕೇಳಿದ್ದೆ. ಅದಕ್ಕೆ 'ಇಲ್ಲ ಕಣೋ ನಾನು ಒಂಟಿ ಅಲ್ಲ, ಈ ಪೆನ್ನಿನಲ್ಲಿ ನಿನ್ನ ಅಜ್ಜಿ ಇದಾರೆ. ಈ ಪೆನ್ನು ಕೈಲಿ ಹಿಡಿದರೆ ನಾನು ನಿನ್ನಜ್ಜಿ ಕೈ ಹಿಡಿದಿದೀನಿ ಅನಿಸುತ್ತೆ' ಅಂದರು. 'ಮತ್ತೆ ನನಗ್ಯಾಕೆ ಹಾಗನಿಸೋಲ್ವಲ್ಲ ಅಜ್ಜ?' ಅಂತ ಕೇಳಿದ್ದಕ್ಕೆ ಅಜ್ಜ ನಕ್ಕು 'ಅದೇ ಕಣೋ ಪ್ರೀತಿ ಅನ್ನೋದು. ನಾನು